

# ಮೊಂಟೆ ಹರಕೆ

ಪ್ರತಿಯೊಂದು ದೇವಾಲಯದಲ್ಲಿ ಒಂದೊಂದು ವಿಶಿಷ್ಟ ಹರಕೆಯ ಕ್ರಮ ಇರುತ್ತದೆ. ಆದರೆ ಮೊಂಟೆತಡ್ಕ ಎಂಬಲ್ಲಿ ಹರಕೆಯ ಸಾಧನವೇ ಕ್ಷೇತ್ರದ ನಾಮಧೇಯ ಆಗಿರುವುದು ಇಲ್ಲಿನ ವಿಶೇಷವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ, ಬೆಳ್ತಂಗಡಿ ತಾಲೂಕಿನ, ಶಿಬಾಜೆ ಗ್ರಾಮದ ಪ್ರಕೃತಿ ಸೌಂದರ್ಯದ ತಪ್ಪಲಲ್ಲಿ ಮೊಂಟೆತಡ್ಕ ಎಂಬ ಸನ್ನಿಧಾನವಿದೆ. ಇಲ್ಲಿ ಸುಮಾರು 800 ಸಂವತ್ಸರಗಳ ಇತಿಹಾಸ ಹೊಂದಿರುವ ಶ್ರೀ ದುರ್ಗಾಪರಮೇಶ್ವರಿ ದೇವಿ ವಿರಾಜಮಾನಳಾಗಿದ್ದಾಳೆ. ಇಲ್ಲಿಗೆ ಸಲ್ಲಿಸಲ್ಪಡುವ ಹರಕೆಗಳಲ್ಲಿ ಮೊಂಟೆಯ ಹರಕೆಯು ಬಹಳ ವಿಶೇಷವಾಗಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೃಷಿ ಮತ್ತು ವ್ಯವಸಾಯವು ದುಡಿಮೆಯ ಪ್ರಧಾನ ಅಂಗವಾಗಿದೆ. ಹಾಗಾಗಿ ದನಕರುಗಳ ಸಾಕಣೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಬಯಲಿನ್ಲ ಹುಲ್ಲು ಮೇಯಲು ಹೋದ ದನಕರುಗಳು ಯಾವ ದಿಕ್ಕಿನಲ್ಲಿದೆ, ಎಲ್ಲಿವೆ ಮತ್ತು ಎಷ್ಟು ದೂರದಲ್ಲಿವೆ ಎಂಬುದನ್ನು ಪತ್ತೆ ಹಚ್ಚಲು ಕಷ್ಟವಾಗುತ್ತದೆ. ಈ ಕಾರಣಕ್ಕಾಗಿ ಅದರ ಕುತ್ತಿಗೆಗೆ ಮೊಂಟೆ (ಬಿದಿರಿನಲ್ಲಿ ತಯಾರಿಸಿದ ಗಂಟೆ)ಯನ್ನು ಕಟ್ಟಲಾಗುತ್ತದೆ. ಈ ಗಂಟೆಯಿಂದ ಬರುವ ಶಬ್ದದಿಂದ ಅವುಗಳ ಇರುವಿಕೆಯ ಸುಳಿವು ಬೇಗನೆ ಸಿಗುತ್ತದೆ. ಕೆಲವೊಂದು ಹಳ್ಳಿಗಳಲ್ಲಿ ಮಾತ್ರ ಇದನ್ನು ತಯಾರಿಸುವ ಕಲೆಯು ಮುಂದುವರೆಸಿಕೊಂಡು ಬಂದಿರುವುದರಿಂದ ಈಗಲೂ ಇದರ ಬಳಕೆಯಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ವೈವಿಧ್ಯಮಯ ಲೋಹದ ಗಂಟೆಗಳನ್ನೇ ಹೆಚ್ಚು ಉಪಯೋಗಿಸುವುದರಿಂದ ಮೊಂಟೆಯ ಪರಿಚಯ ಇರಲಿಕ್ಕೆ ಇಲ್ಲ.

ದನಕರುಗಳ ಆರೋಗ್ಯಕ್ಷೇಮಕ್ಕಾಗಿ ಅಥವಾ ಹಾದಿ ತಪ್ಪಿಸಿಕೊಂಡು ಹೋದಾಗ ಈ ಬಿದಿರಿನ ಗಂಟೆ (ಮೊಂಟೆ)ಯನ್ನು ಹರಕೆಯ ರೂಪದಲ್ಲಿ ನೀಡುವ ಸಾಂಪ್ರದಾಯವು ಈ ಕ್ಷೇತ್ರದಲ್ಲಿ ಹುಟ್ಟಿಕೊಂಡಿತು. ಹಾಗೆಯೇ ದೇವಾಲಯದ ವಿಶೇಷವೂ ಆಗಿದೆ. ಇದೇ ಕಾರಣಕ್ಕಾಗಿ ಈ ಕ್ಷೇತ್ರಕ್ಕೆ ಮೊಂಟೆತಡ್ಕ ಎಂಬ ಹೆಸರು ಬಂದಿದೆ. ಕೈ ಅಳತೆಯಲ್ಲಿ ಸುಮಾರು ಅರ್ಧ ಇಂಚುಗಳಷ್ಟು ಉದ್ದದ ಹಸಿ ಬಿದಿರಿಗೆ (ಮೊಂಟೆ) ಹೆಚ್ಚು ಶಬ್ದ ಬರುವ ಹಾಗೆ 2 ಬದಿಗಳಲ್ಲಿ ಉದ್ದನೆಯ ರಂಧ್ರಗಳನ್ನು ಮಾಡಿಕೊಳ್ಳುತ್ತಾರೆ. ಬಿದಿರು ಒಣಗಿದ ಮೇಲೆ ಅಕ್ಕಪಕ್ಕಕ್ಕೆ ಗಂಟೆ (ಗಡಿ)ಗಳನ್ನು ಕಾಡಿನಲ್ಲಿ ಸಿಗುವ ಬಳ್ಳಿನಾರುಗಳಿಂದ ಕಟ್ಟುತ್ತಾರೆ. ಈ ಗಂಟೆಯನ್ನು ದೇವಾಲಯದಲ್ಲಿ 25 ರೂಪಾಯಿಗೆ ಮಾರಾಟ ಮಾಡುತ್ತಾರೆ. ಹರಕೆಯಾಗಿ ಬಂದ ಗಂಟೆಗಳನ್ನು ಒಂದು ಜಾಗದಲ್ಲಿ ಶೇಖರಣೆ ಮಾಡಲಾಗುತ್ತದೆ. ಗರ್ಭಿಣಿ ಹಸುಗಳ ಸಲುವಾಗಿ ಹರಕೆ ಕಟ್ಟಿಕೊಂಡರೆ ಕರು ಹುಟ್ಟಿದ 15 ದಿನದ ಒಳಗೆ ದನದ ಹಾಲಿನ ಜೊತೆಗೆ ಗೋವಿನ ಕುತ್ತಿಗೆಗೆ ಕಟ್ಟಿದ ಮೊಂಟೆಯನ್ನು ದೇವಿಗೆ ಒಪ್ಪಿಸಬೇಕು.



■ ಚಿತ್ರ- ಬರಹ: ರಮ್ಯಶ್ರೀ